

# ಹರಸೆ ಗೌರಮ್ಮ ಸುಖವಿರಲು ಸಂಸಾರ ಸೊರಗವಾಗಿ

ಬಿಡುಗೆಟ್ಟು ಬರಲಿಲ್ಲ ಬಿಡುಗಟ್ಟಿ ಬಂದಳು
ಹಚ್ಚೆ ಹುಯ್ಯುವ ಬೈಚಮ್ಮನ ಹಿಂದಿಟ್ಟುಕೊಂಡು
ಆಷಾಢಕೆ ಬಂದಿದ್ದ ಹೆಣ್ಣಿಗೆ ನವಿಲುಗರಿ ಬಿಡಿಸೆಂದು
ಗಂಡು ಹುಡುಕುವ ಹುಡುಗಿಗೆ ಕೊಳಲು ಹಾಕೆಂದು

ದಿನ ತುಂಬಿದ ಬಸುರಿಗೆ ತೊಟ್ಟಿಲು ಹಾಕಿಸಲು
ಮೂಕ ಬಾಲೆಯ ಕೈ ಮೇಲೆ ಕೋಗಿಲ ಬರೆಯೆಂದು
ವಿಧವೆ ವರದಳ ಹಣೆ ಮೇಲೆ ಚಂದ್ರಮನ ರಚಿಸೆಂದು
ಗಂಡ ತೊರೆದಳ ಬಲಹೆಬ್ಬೆರಳ ಮೇಲೆ ಮಲ್ಲಿಗೆ ಬಿಡಿಸೆಂದು
ಕುಡುಕ ಗಂಡನ ಕಾಟದ ನೋವಿಗೆ ಕಿರುನಗೆಯ ಹೂ ಮಡಿಸಿ
ಹಾಡಿದಳು ಚಂದ್ರಮಲ್ಲಿ ಬೈಚಮ್ಮನಿಗೆ ಹಿಮ್ಮೇಳವಾಗಿ
ಹೆಣ್ಣುಗಳು ನಗಬೇಕು ಆಳಿಸದ ಹಚ್ಚೆಯಂತೆ
ಹರಸೆ ಗೌರಮ್ಮ ಸುಖವಿರಲು ಸಂಸಾರ ಸೊರಗವಾಗಿ.



**ಸ. ರಘುನಾಥ**

ಕಲೆ: ವಾಗೀಶ ಹೆಗಡೆ

ಸೊರಗ – ಸ್ವರ್ಗ